ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-1, July-August 2025, Pp. 43-52
©*IIMRD*, Mysuru

IIMRD JOURNALS

www.iimrd.com

# ಸ್ವಯಂ ಉದ್ಯೋಗ ಯೋಜನೆಯ ಅನುಷ್ಠಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪಾತ್ರ ಒಂದು ವಿಶ್ಲೇಷಣೆ

**ಸಂತೋಷ್ ಕುಮಾರ್ ಹೆಚ್.ಜೆ [1] ಮತ್ತು ಪ್ರೊ.ಕೃಷ್ಣ ಹೊಂಬಾಳ್[2]**

[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

**ಸಾರಾಂಶ: (Abstract)**

*ಈ ಸಂಶೋಧನಾ ಲೇಖನವು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿನ ಪ್ರಮುಖ ಯೋಜನೆಗಳಲ್ಲಿ ಒಂದಾದ ಸ್ವಯಂ ಉದ್ಯೋಗ ಯೋಜನೆಯ ರಚನೆ, ಬೆಳವಣಿಗೆ ಮತ್ತು ಪ್ರಗತಿಯನ್ನು ಅಭಿವ್ಯಕ್ತಗೊಳಿಸುತ್ತದೆ. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕ ಮತ್ತು ಯುವತಿಯರು ಸಣ್ಣ ಕೈಗಾರಿಕೆ, ಸೇವಾ ಕ್ಷೇತ್ರ ಮತ್ತು ವ್ಯಾಪಾರಿ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದ ಸಹಾಯಧನ ಮತ್ತು ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು.*

**ಮುಖ್ಯಪದಗಳು (Keywords):** ಸ್ವಯಂ ಉದ್ಯೋಗ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಸಹಾಯ ಧನ, ಉದ್ಯೋಗ ಯೋಜನೆ

## ಪೀಠಿಕೆ

ಕರ್ನಾಟಕ ರಾಜ್ಯವು ಪರಿಶಿಷ್ಟ ಜಾತಿಯವರ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಆಸಕ್ತಿಗಳಿಗೆ ವಿಶೇಷ ಗಮನವನ್ನು ನೀಡಿದೆ. ಪರಿಶಿಷ್ಟ ಜಾತಿಯವರಿಗೆ ನಿಗಮಗಳು ಮತ್ತು ವಿಶೇಷ ಯೋಜನೆಗಳ ಮೂಲಕ ಸವಲತ್ತನ್ನು ಕೊಟ್ಟರೆ ಉಳಿದವರಿಗೆ ಸಾಮಾನ್ಯ ಯೋಜನೆಯಲ್ಲಿಯೇ ಸೌಲಭ್ಯವನ್ನು ಒದಗಿಸಲಾಗುವುದು. ಇದರ ಉದ್ದೇಶವೆಂದರೆ ಇದರಿಂದಾಗಿ ಎಲ್ಲ ಜಾತಿ ಮತಗಳ ಜನರಲ್ಲಿ ಸೌಹಾರ್ದ ವಾತಾವರಣವನ್ನು ಕಲ್ಪಿಸುವುದಾಗಿದೆ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಮಾರ್ಚ್ 20, 1975ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆ ಮಾಡಲಾಯಿತು. ಇದರ ಜಿಲ್ಲಾ ಕಚೇರಿಯನ್ನು 1979–1980ರಲ್ಲಿ ಆರಂಭಿಸಲಾಯಿತು. ಈ ನಿಗಮ ಆಶ್ರಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಕೃಷಿ ಮತ್ತು ಕೋಳಿ ಸಾಕಣೆಯಂತಹ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕ ನೆರವು ನೀಡುವ ಉದ್ದೇಶದಿಂದ ರಾಷ್ಟ್ರೀಕೃತ ಮತ್ತು ಗ್ರಾಮೀಣ ಬ್ಯಾಂಕುಗಳ ಸಹಯೋಗದೊಂದಿಗೆ 25

*Please cite this article as:* ಸಂತೋಷ್ ಕುಮಾರ್ ಹೆಚ್.ಜೆ & ಕೃಷ್ಣ ಹೊಂಬಾಳ್ (2025). ಸ್ವಯಂ ಉದ್ಯೋಗ ಯೋಜನೆಯ ಅನುಷ್ಠಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪಾತ್ರ ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(1). ಪು.ಸಂ.* 43–52

ಪ್ರತಿಶತದಷ್ಟು ಮಾರ್ಜಿನ್ ಮನಿ ಸಾಲ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ, ಆಟೋರಿಕ್ಷಾ ಹೊಂದುವುದು, ನ್ಯಾಯಯುತ ಡಿಪೋ ತೆರೆಯುವುದು ಹೀಗೆ ಮುಂತಾದ ಸ್ವ–ಉದ್ಯೋಗ ಉದ್ಯಮಗಳನ್ನು ಕೈಗೊಳ್ಳಲು ಆಶ್ರಯ ಕಲ್ಪಿಸಿಕೊಡುವುದು ಈ ನಿಗಮದ ಉದ್ದೇಶವಾಗಿತ್ತು.

**ಮರುನಾಮಕರಣ**

ಕರ್ನಾಟಕ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು 13.10.2005ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಎಂದು ಮರುನಾಮಕರಣ ಮಾಡಿತು.

**ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ**

ಪ್ರಸುತ್ತ ನಿಗಮವು ಪರಿಶಿಷ್ಟ ಜಾತಿಯವರ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಬಡತನದ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅಭಿವೃದ್ಧಿಪಡಿಸುವುದು. ಸಾಲದ ಸೌಲಭ್ಯಗಳು ಮತ್ತು ಅನುದಾನಿತ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸುವುದೇ ನಿಗಮದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ನಿಗಮದ ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಟಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದ ಅನುಷ್ಟಾನದ ಜವಾಬ್ದಾರಿಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಛೇರಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ.

**ನಿಗಮದ ಧ್ಯೇಯೋದ್ದೇಶ**

ಬಡತನದ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸುವುದು. ಸರ್ಕಾರದ ಅನುದಾನದಿಂದ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸುವುದೇ ನಿಗಮದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ.

**ನಿಗಮದ ಜವಾಬ್ದಾರಿ ಮತ್ತು ವಿನ್ಯಾಸ**

- ಸರ್ಕಾರ ಮಂಜೂರು ಮಾಡಿರುವ ಮಾನವ ಸಂಪನ್ಮೂಲಗಳಿಂದ ನಿಗಮವು ಸರ್ಕಾರದಿಂದ ರೂಪಿಸಲ್ಪಟ್ಟ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.
- ಸಂಸ್ಥೆಯ ಯೋಜನೆಗಳನ್ನು ರೂಪಿಸುವಲ್ಲಿ ನಿರ್ದೇಶಕರ ಮಂಡಳಿಯು ಉನ್ನತ ಮಟ್ಟದ ನೀತಿಯ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ.
- ನಿಗಮದ ವಿವಿಧ ವೃಂದಗಳಲ್ಲಿ ಒಟ್ಟು 381 ಅಧಿಕಾರಿ ಮತ್ತು ನೌಕರರ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ.

**ಸ್ವಯಂ ಉದ್ಯೋಗ ಯೋಜನೆ**

ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕ ಮತ್ತು ಯುವತಿಯರು ಸಣ್ಣ ಕೈಗಾರಿಕೆ, ಸೇವಾ ಕ್ಷೇತ್ರ ಮತ್ತು ವ್ಯಾಪಾರಿ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು

ನಿಗಮದ ಸಹಾಯಧನ ಮತ್ತು ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ಈ ಯೋಜನೆಯಡಿ ಮೂರು ಹಂತದ ಘಟಕ ವೆಚ್ಚವನ್ನು ಆಧರಿಸಿ ಸಹಾಯಧನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

- ಘಟಕ ವೆಚ್ಚ ರೂ.5.00 ಲಕ್ಷಗಳವರೆಗೆ ಶೇಕಡ 70 ಅಥವಾ ಗರಿಷ್ಠ ರೂ. 3.50 ಲಕ್ಷ ಸಹಾಯಧನ
- ಘಟಕ ವೆಚ್ಚ ರೂ.5.00 ದಿಂದ 10.00 ಲಕ್ಷಗಳವರೆಗೆ ಶೇಕಡ 60 ಅಥವಾ ಗರಿಷ್ಠ ರೂ. 5.00 ಲಕ್ಷ ಸಹಾಯಧನ
- ಘಟಕ ವೆಚ್ಚ ರೂ.10.00 ದಿಂದ 20.00 ಲಕ್ಷಗಳವರೆಗೆ ಶೇಕಡ 50 ಅಥವಾ ಗರಿಷ್ಠ ರೂ. 5.00 ಲಕ್ಷ ಸಹಾಯಧನ

ನಿಗಮದ ಸಹಾಯಧನವನ್ನು ಹೊರತುಪಡಿಸಿ ಘಟಕ ವೆಚ್ಚದ ಉಳಿದ ಭಾಗವನ್ನು ಬ್ಯಾಂಕ್ ಸಾಲದಿಂದ ಭರಿಸಲಾಗುವುದು.

**ಅರ್ಹತೆಗಳು**

1. ಅರ್ಜಿದಾರರು ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.
2. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
3. ಅರ್ಜಿದಾರರು 21 ವರ್ಷದಿಂದ 59 ವರ್ಷದವರೆಗಿನ ವಯೋಮಾನದವರಾಗಿರಬೇಕು.
4. ಅರ್ಜಿದಾರರು ಕುಟುಂಬದ ವಾರ್ಷಿಕ ವರಮಾನವು ರೂ.1,50,000 ಗ್ರಾಮೀಣ ಹಾಗೂ ರೂ. 2,00,000 ನಗರ ಪ್ರದೇಶದವರಿಗೆ ಮಿತಿಯೊಳಗಿರಬೇಕು.
5. ಅರ್ಜಿದಾರರು ಕುಟುಂಬದ ಅವಲಂಬಿತ ಯಾವುದೇ ಸದಸ್ಯರು ಈ ಹಿಂದೆ ನಿಗಮ ಮತ್ತು ಸರ್ಕಾರದಿಂದ ರೂ.1,00,000 ಮೇಲ್ಪಟ್ಟು ಸೌಲಭ್ಯ ಪಡೆದಿದ್ದಲ್ಲಿ, ಅಂತಹ ಫಲಾನುಭವಿಗಳು ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.
6. ಅರ್ಜಿದಾರರು ಘಟಕವನ್ನು ಸ್ಥಾಪಿಸಲು ಅವಶ್ಯಕವಿರುವ ಸ್ಥಳಾವಕಾಶವನ್ನು ಹೊಂದಿರಬೇಕು.

**ಷರತ್ತುಗಳು :**

1. ಅರ್ಜಿದಾರರು ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಬೇಕು.
2. ಆಯ್ಕೆಯಾದ ಫಲಾನುಭವಿಯೂ ಬ್ಯಾಂಕ್‌ನಿಂದ ಘಟಕ ವೆಚ್ಚದ ಉಳಿದ ಭಾಗವನ್ನು ಮಂಜೂರಾತಿ ಪಡೆಯಬೇಕು.
3. ಮಂಜೂರಾತಿ ಪಡೆದ ಫಲಾನುಭವಿಯು ಅನರ್ಹರೆಂದು ಕಂಡು ಬಂದಲ್ಲಿ ಮಂಜೂರಾತಿಯನ್ನು ಯಾವುದೇ ಹಂತದಲ್ಲಿ ರದ್ದುಪಡಿಸಲಾಗುತ್ತದೆ.

## ಸ್ವಯಂ ಉದ್ಯೋಗ ಯೋಜನೆಯ ಪ್ರಮುಖ ಬೆಳವಣಿಗೆಗಳು

### ಸ್ವಯಂ ಉದ್ಯೋಗ ಬ್ಯಾಂಕ್ ಲಿಂಕ್ಡ್ ಯೋಜನೆಗಳಿಗೆ ಸಹಾಯಧನ ಹೆಚ್ಚಿಸುವಿಕೆ

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತಗಳಿಂದ 2014–15ನೇ ಸಾಲಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾಲವನ್ನು ಬ್ಯಾಂಕುಗಳಿಂದ ಪಡೆಯಲು ಅನುಕೂಲವಾಗುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಂದ ಘಟಕ ವೆಚ್ಚ ರೂ.1.00 ಲಕ್ಷಗಳಿಗೆ ಮೀರಿದ ಪ್ರಕರಣಗಳಲ್ಲಿ ಮಾತ್ರ ಸಹಾಯಧನ ಗರಿಷ್ಠ ಮಿತಿಯನ್ನು ರೂ.1.00 ಲಕ್ಷಗಳಿಂದ ರೂ.2.00 ಲಕ್ಷಗಳಿಗೆ ಹೆಚ್ಚಿಸಿ ಆದೇಶವನ್ನು ನೀಡಲಾಗಿರುತ್ತದೆ.

ಗಂಗಾ ಕಲ್ಯಾಣ ಯೋಜನೆ ಭೂ ಒಡೆತನ ಮತ್ತು ಮೈಕ್ರೋ ಕ್ರೆಡಿಟ್ ಮತ್ತು ಮೈಕ್ರೋ ಫೈನಾನ್ಸ್ (ರೂ.25,000/–ವರೆಗೆ) ನೇರ ಸಾಲ ನೀಡಲಾಗುತ್ತಿದೆ. ಉಳಿದ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಸರ್ಕಾರದಿಂದ ಸಹಾಯಧನ ಮತ್ತು ಬ್ಯಾಂಕಗಳಿಂದ ಸಾಲ ನೀಡಲಾಗುತ್ತಿದೆ. ಆದರೆ ಪ್ರಸುತ್ತ ಸಹಾಯಧನ ಘಟಕ ವೆಚ್ಚ ರೂ.1.00 ಲಕ್ಷದವರೆಗೆ ಇದ್ದಲ್ಲಿ ಶೇಕಡ 50 ಪ್ರತಿಶತ ನೀಡಲಾಗುತ್ತದೆ ಮತ್ತು ಘಟಕ ವೆಚ್ಚ ರೂ.1.00 ಲಕ್ಷ ಮೀರಿದಲ್ಲಿ ಸಹಾಯಧನ ಶೇಕಡ 33% ಅಥವಾ ರೂ.2.00 ಲಕ್ಷದವರೆಗೆ ಸೀಮಿತಗೊಳಿಸಲಾಗಿದೆ. ಇದರಿಂದ ಬ್ಯಾಂಕ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಲ ನೀಡಲು ಮುಂದಾಗುತ್ತಿಲ್ಲ. ಆದ್ದರಿಂದ ಬ್ಯಾಂಕ್ ಸಾಲ ಪಡೆಯಲು ಸಹಾಯಧನವನ್ನು ಹೆಚ್ಚಿಸುವುದು ಸೂಕ್ತವೆಂದು ಭಾವಿಸಿ, ಸ್ವಯಂ ಉದ್ಯೋಗ ಬ್ಯಾಂಕ್ ಸಾಲ ಲಿಂಕ್ಡ್ ಯೋಜನೆಗಳಿಗೆ ಸಹಾಯಧನವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

| **ಸ್ವಯಂ ಉದ್ಯೋಗ ಯೋಜನೆ** | **ಸಹಾಯಧನ** | **ಷರಾ** |
|---|---|---|
| ಘಟಕ ವೆಚ್ಚ ರೂ.1.00 ಲಕ್ಷದಿಂದ ರೂ.5.00 ಲಕ್ಷಗಳವರೆಗೆ | 70% ಅಥವಾ ಗರಿಷ್ಠ ರೂ.3.5 ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |
| ಘಟಕ ವೆಚ್ಚ ರೂ.5.00 ಲಕ್ಷದಿಂದ ರೂ.10.00 ಲಕ್ಷಗಳವರೆಗೆ | 60% ಅಥವಾ ಗರಿಷ್ಠ ರೂ.5.00 ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |
| ಘಟಕ ವೆಚ್ಚ ರೂ.10.00 ಲಕ್ಷದಿಂದ ರೂ.20.00 ಲಕ್ಷಗಳವರೆಗೆ | 50% ಅಥವಾ ಗರಿಷ್ಠ ರೂ.5.00 ಲಕ್ಷ | ಉಳಿದ ಮೊತ್ತ ಬ್ಯಾಂಕ್ ಸಾಲ |

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಸ್ವಯಂ ಉದ್ಯೋಗ ಬ್ಯಾಂಕ್ ಲಿಂಕ್ಡ್ ಯೋಜನೆಗಳಿಗೆ ಘಟಕ ವೆಚ್ಚ ರೂ.1.00 ಲಕ್ಷಗಳಿಗೆ ನೀಡಿದ ಪ್ರಕರಣಗಳಲ್ಲಿ ಮಾತ್ರ 2015–16ನೇ ಸಾಲಿನಿಂದ ಪ್ರಸುತ್ತ ಇರುವ ಸಹಾಯ ಧನವನ್ನು ರೂ.2.00ಗಳಿಂದ ರೂ.3.00 ಲಕ್ಷಗಳಿಗೆ ಹೆಚ್ಚಿಸಿ, ಈ ಕೆಳಕಂಡ ಷರತ್ತುಗೊಳಪಡಿಸಿ ಆದೇಶಿಸಲಾಗಿದೆ.

**ಷರತ್ತುಗಳು:**

1. ಮೇಲ್ಕಂಡ ಸಹಾಯಧನ ಬ್ಯಾಂಕ್ ಸಾಲ ಲಿಂಕ್ಡ್ ಸ್ವಯಂ ಉದ್ಯೋಗ ಯೋಜನೆಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಶೇಕಡ 33% ಗುರಿಯನ್ನು ಮಹಿಳೆಯಿರಿಗೆ ಮೀಸಲಿಡುವುದು.
3. ಶೇಕಡ 3% ರಷ್ಟು ಗುರಿಯನ್ನು ವಿಕಲಚೇತನರಿಗೆ ಮೀಸಲಿಡುವುದು.
4. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಸ್ವಯಂ ಉದ್ಯೋಗದಡಿ ಅವಕಾಶ ನೀಡುವುದು.
5. ಈ ಯೋಜನೆಗಳಡಿಯಲ್ಲಿ ಅವಕಾಶ ಪಡೆದ ಫಲಾನುಭವಿಗಳು ಮತ್ತೆ 5 ವರ್ಷಗಳವರೆಗೆ ಯಾವುದೇ ಸೌಲಭ್ಯ ಪಡೆಯಲು ಮೀಸಲಿಡುವುದು.
6. ಶೇಕಡ 3% ರಷ್ಟು ಗುರಿಯನ್ನು ವಿಕಲಚೇತನರಿಗೆ ಮೀಸಲಿಡುವುದು.
7. ಈ ಯೋಜನೆಯ ಸೌಲಭ್ಯ ಪಡೆಯಲು ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.1.50 ಲಕ್ಷ ಮತ್ತು ನಗರ ಪ್ರದೇಶದಲ್ಲಿ ರೂ.2.00 ಲಕ್ಷ ಮೀರಬಾರದು.
8. ಕೃಷಿಯೇತರ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಫಲಾಪೇಕ್ಷಿತಗಳ ವಯೋಮಿತಿ ಕನಿಷ್ಠ 21 ವರ್ಷಗಳು ಮತ್ತು ಗರಿಷ್ಠ 50 ವರ್ಷಗಳ ಒಳಗಿರಬೇಕು.
9. ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳಿಗೆ ಫಲಾಪೇಕ್ಷಿತಗಳ ಮಯೋಮಿತಿ ಕನಿಷ್ಠ 21 ವರ್ಷಗಳು ಮತ್ತು ಗರಿಷ್ಠ 60 ವರ್ಷಗಳ ಒಳಗಿರಬೇಕು.

ಈ ಆದೇಶವು ದಿನಾಂಕ:01.04.2015ರಿಂದ ಜಾರಿಗೆ ತರಲಾಗಿರುತ್ತದೆ. ಹಾಗೂ ಇದಕ್ಕೆ ತಗಲುವ ವೆಚ್ಚವನ್ನು 2015–16ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗಮಗಳಿಗೆ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸಬೇಕಾಗಿರುತ್ತದೆ.

**ಕಿಯೋನಿಕ್ಸ್ ಎಂಫ್ಯಾನಲ್ ಆದ ಸಂಸ್ಥೆಗಳಿಂದ ತಾಂತ್ರಿಕ ಬೆಂಬಲ ಪಡೆಯುವಿಕೆ**

2018–19ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿರುದ್ಯೋಗಿ 5000 ಯುವಕ ಮತ್ತು ಯುವತಿಯರಿಗೆ ಸಾಮಾಜಿಕ ಉದ್ಯಮ ಶೀಲತಾ ಯೋಜನೆಯಡಿ ಸರ್ಕಾರಿ ಮತ್ತು ಖಾಸಗಿ ಬ್ರಾಂಡೆಡ್ ಸಂಸ್ಥೆಗಳ ಸಹಯೋಗದೊಂದಿಗೆ ಆದಾಯ ತರುವ ಆರ್ಥಿಕ ಚಟುವಟಿಕೆಗಳನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಎಂಟರ್‌ಪ್ರಿನರ್‌ಶಿಪ್ ಅಭಿವೃದ್ಧಿಪಡಿಸುವ ಸಲುವಾಗಿ "Technical support unit for entrepreneurship development in karnataka" ಸ್ಥಾಪನೆ ಮಾಡಲು ಅನುಷ್ಠಾನಕ್ಕೆ ಕಿಯೋನಿಕ್ಸ್‌ನಲ್ಲಿ ಎಂಫ್ಯಾನಲ್ ಆದ ಸಂಸ್ಥೆಗಳಿಂದ ತಾಂತ್ರಿಕ ಬೆಂಬಲವನ್ನು ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರು ಕೋರಿಕೆಯನ್ನು ಸಲ್ಲಿಸಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮಗಳಿಂದಲೂ ಈ ಕಿಯೋನಿಕ್ಸ್‌ನಲ್ಲಿ ಎಂಫ್ಯಾನಲ್ ಆದ ಸಂಸ್ಥೆಯ ಸೇವೆಯನ್ನು ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಅನುಮೋದನೆ ನೀಡಿ, ಆದೇಶ ಮಾಡಲಾಗಿರುತ್ತದೆ.

**ಷರತು ಮತ್ತು ನಿಬಂಧನೆಗಳು**

1. ಎಲ್ಲಾ ನಿಗಮಗಳ ಪರವಾಗಿ ವ್ಯವಸ್ಥಾಪಕ ನಿರ್ದೇಶಕರು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಕಿಯೋನಿಕ್ಸ್ ಸಂಸ್ಥೆಯೊಂದಿಗೆ ಎಂಫ್ಯಾನಲ್‌ಮೆಂಟ್ ಆಗಿರುವ ಸಲಹೆಗಾರರ ಸೇವೆಯನ್ನು ಆದೇಶದಲ್ಲಿನ ದರಗಳಂತೆ ಪಡೆದು ಒಂದು ವರ್ಷಕ್ಕೆ ರೂ.1,71,60,000 ಗಳಿಗೆ ಮೀರದಂತೆ ಪಾವತಿಸುವುದು.
2. ವ್ಯವಸ್ಥಾಪಕ ನಿರ್ದೇಶಕರು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಕಿಯೋನಿಕ್ಸ್ ಜೊತೆ ಕರಾರು ಒಪ್ಪಂದ ಮಾಡಿಕೊಳ್ಳುವುದು. ಸದರಿ ಕರಾರು ಒಪ್ಪಂದವನ್ನು ಒಂದು ವರ್ಷಕ್ಕೆ ಮಾತ್ರ ಸೀಮಿತಗೊಳಿಸುವುದು. ವಿವಿಧ ಯೋಜನೆಗಳನ್ನು ಯಶ್ವಸಿಯಾಗಿ ಅನುಷ್ಠಾನಗೊಳಿಸಿದಲ್ಲಿ ಟಿ.ಎಸ್.ಯು ಮುಂದುವರಿಸುವ ಬಗ್ಗೆ ತದನಂತರ ನಿರ್ಧರಿಸಲಾಗುವುದು.
3. ಟಿ.ಎಸ್.ಯು (ತಾಂತ್ರಿಕ ಬೆಂಬಲ)ಕ್ಕೆ ತಗಲುವ ವೆಚ್ಚವನ್ನು ಮೇಲ್ಕಂಡ ಎಲ್ಲಾ ನಿಗಮಗಳು ಕಾರ್ಯಭಾರ ಆಧರಿಸಿ ಭರಿಸುವುದು.
4. ಸದರಿ ಯುನಿಟ್‌ಗೆ ಬೇಕಾಗುವ ಸ್ಥಳಾವಕಾಶವನ್ನು ಮೇಲ್ಕಂಡ ನಿಗಮಗಳು ಭರಿಸುವುದು.
5. ಸಲಹೆಗಾರರು ನಮೂದಿಸಿದಂತೆ ಪ್ರಕಾರ್ಯಗಳನ್ನು ಸೂಕ್ತವಾಗಿ ಪರಿಶೀಲಿಸಿ ವ್ಯವಸ್ಥಾಪಕ ನಿರ್ದೇಶಕರು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಪ್ರಕಾರ್ಯಗಳನ್ನು ನಿರ್ಧರಿಸುವುದು.
6. ಕಿಯೋನಿಕ್ಸ್ ಎಂಫ್ಯಾನಲ್‌ಮೆಂಟ್ ಆಗ್ರಿಮೆಂಟ್ ಪ್ರಕಾರ ಸಲಹೆಗಾರಿಗೆ ನಮೂದಿಸಿರುವಂತೆ, 06 ಸಲಹೆಗಾರರಿಗೆ ಒಂದು ವರ್ಷಕ್ಕೆ ಎಲ್ಲಾ ನಿಗಮಗಳ ಸೇವೆಗೆ ಗರಿಷ್ಟ ರೂ.1,71,60,000 ಹಣವನ್ನು ಹಂತವಾಗಿ ಕಿಯೋನಿಕ್ಸ್ ಸಂಸ್ಥೆಗೆ ನೀಡಿ ನಂತರ ಸೇವೆಯನ್ನು ಪಡೆಯುವುದು.
7. ತಾಂತ್ರಿಕ ಬೆಂಬಲ ಸೇವೆಯನ್ನು ತೃಪ್ತಿಕರವಾಗಿರುವ ಬಗ್ಗೆ ಸಲಹೆಗಾರರಿಗೆ ನಿಗದಿತವಾಗಿ ಕಾರ್ಯನಿರ್ವಹಿಸಿರುವ ಬಗ್ಗೆ ಸೂಕ್ತ ಹಾಜರಾತಿ ಮತ್ತು ವರದಿಯನ್ನು ದಾಖಲಿಸತಕ್ಕದ್ದು.

**ಕಿರುಸಾಲ, ಸ್ವಯಂ ಉದ್ಯೋಗ ಇತ್ಯಾದಿ ಯೋಜನೆಗಳಡಿ ಸಹಾಯಧನ ಹೆಚ್ಚಿಸುವಿಕೆ**

2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನಿಭವಿಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ

ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಯೋಜನೆಗಳ ಸಹಾಯಧನ ಮತ್ತು ಘಟಕ ವೆಚ್ಚಗಳನ್ನು ಈ ಕೆಳಕಂಡಂತೆ ದಿನಾಂಕ 01–09–2013 ರಿಂದ ಜಾರಿಗೆ ಬರುವಂತೆ ಹೆಚ್ಚಿಸಲಾಗಿದೆ.

- ಕಿರುಸಾಲ ಯೋಜನೆಯಡಿಯಲ್ಲಿ ಪ್ರತಿ ಫಲಾಭವಿಗಳಿಗೆ ನೀಡುತ್ತಿರುವ ಸಹಾಯಧನವನ್ನು ರೂ.50,000 ರಿಂದ ರೂ.10,000ಕ್ಕೆ ಹೆಚ್ಚಿಸಲಾಗಿದೆ.
- ಸ್ವಯಂ ಉದ್ಯೋಗ ಯೋಜನೆಯಡಿ ಘಟಕ ವೆಚ್ಚಕ್ಕೆ ರೂ.1.00 ಲಕ್ಷ ಒಳಗೆ ಇರುವ ಚಟುವಟಿಕೆಗಳಿಗೆ ಸಹಾಯಧನ 50% ಅಥವಾ ಗರಿಷ್ಟ ಮಿತಿಯನ್ನು ರೂ.25,000 ರಿಂದ ರೂ.35,000ಕ್ಕೆ ಹೆಚ್ಚಿಸಲಾಗಿದೆ.
- ಭೂ ಒಡೆತನ ಯೋಜನೆಯನ್ನು ಘಟಕ ವೆಚ್ಚವನ್ನು ರೂ.5.00 ಲಕ್ಷದಿಂದ ರೂ.7.50 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

ಮೇಲ್ಕಂಡ ಯೋಜನೆಗಳು ಅನುಷ್ಟಾನಗೊಳಿಸಲು ತಗಲುವ ವೆಚ್ಚವನ್ನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಗೆ ಒದಗಿಸಿದ ಅನುದಾನದಿಂದ ಭರಿಸಲಾಗುವುದು.

**ವೃತ್ತಿ ಕೌಶಲ್ಯ ಪಡೆದ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಘಟಕ ಆರಂಭಿಸಲು ಸಹಾಯಧನ**

2017–18ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ವೃತ್ತಿ ಕೌಶಲ್ಯ ಪಡೆದ 1400 ಪರಿಶಿಷ್ಟ ಜಾತಿ ಮತ್ತು 600 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ 5 ಲಕ್ಷ ರೂ.ಗಳವರೆಗಿನ ಘಟಕ ವೆಚ್ಚವನ್ನು ಹೊಂದಿರುವ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು 2.5 ಲಕ್ಷ ರೂ. ಅಥವಾ ಶೇಕಡ 50 ರಷ್ಟು ಯೋಜನಾ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡುವ ಬಗ್ಗೆ ಈ ಕೆಳಕಂಡ ಷರತ್ತುಗೊಳಪಡಿಸಿ ಆದೇಶವನ್ನು ನೀಡಲಾಗಿದೆ.

1. ಮೇಲ್ಕಂಡ ಸಹಾಯ ಧನ ಮತ್ತು ಬ್ಯಾಂಕ್ ಸಾಲ ಲಿಂಕ್ಡ್ ಸ್ವಯಂ ಉದ್ಯೋಗ ಯೋಜನೆಗೆ ಮಾತ್ರ ಅನ್ವಯಿಸುತ್ತದೆ.
2. ಶೇಕಡ 3ರಷ್ಟು ಗುರಿಯನ್ನು ವಿಕಲಚೇತರಿಗೆ ಮೀಸಲಿರಿಸುವುದು.
3. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಸಾಲ ಸೌಲಭ್ಯ ಕಲ್ಪಿಸಲು ಅವಕಾಶವಿರುತ್ತದೆ.
4. ಈ ಯೋಜನೆ ಸೌಲಭ್ಯ ಪಡೆಯಲು ಗ್ರಾಮಾಂತರ ಪ್ರದೇಶದ ಫಲಾಪೇಕ್ಷಿಗಳಿಗೆ ವಾರ್ಷಿಕ ಆದಾಯ ರೂ.1.50 ಲಕ್ಷ ಮತ್ತು ನಗರ ಪ್ರದೇಶದಲ್ಲಿ ರೂ.2.00 ಲಕ್ಷ ಮೀರಿರಬಾರದು.
5. ಕೃಷಿಯೇತರ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಮಯೋಮಿತಿ ಕನಿಷ್ಠ 21 ವರ್ಷಗಳು ಮತ್ತು ಗರಿಷ್ಟ 60 ವರ್ಷಗಳು ಒದಗಿಸಬೇಕಾಗಿರುತ್ತದೆ.

**ಸ್ವಯಂ ಉದ್ಯೋಗ ಯೋಜನೆಯ ಅಂಕಿ–ಅಂಶಗಳು**

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸ್ವಯಂ ಉದ್ಯೋಗ ಯೋಜನೆ ಒಂದು ಪ್ರಮುಖವಾದ ಯೋಜನೆಯಾಗಿದೆ. ಈ ಯೋಜನೆಗೆ ಸಂಬಂಧಿಸಿದಂತೆ, 2010 ರಿಂದ 2020ವರೆಗಿನ

ಪ್ರಾರಂಭಿಕ ಶಿಲ್ಕು, ವಾರ್ಷಿಕ ಗುರಿ, ಆಯವ್ಯಯ, ಕ್ರೋಡೀಕೃತ ಅನುದಾನ, ಬಿಡುಗಡೆಯಾದ ಅನುದಾನ, ವಿಶೇಷ ಕೇಂದ್ರೀಯ ಸಹಾಯಧನ, ಖಜಾನೆಯಿಂದ ಸೆಳೆದ ಮೊತ್ತ, ಒಟ್ಟು ಲಭ್ಯವಿರುವ ಅನುದಾನ, ಒಟ್ಟು ವೆಚ್ಚ ಮತ್ತು ಸಾಧಿಸಿದಂತಹ ಆರ್ಥಿಕ ಮತ್ತು ಭೌತಿಕ ಗುರಿಗಳ ವಿಷಯಗಳನ್ನು ಒಳಗೊಂಡಂತೆ ಅಂಕಿ–ಅಂಶಗಳನ್ನು ಈ ಕೆಳಗಿನ ಕೋಷ್ಟಕ ಮತ್ತು ರೇಖಾಚಿತ್ರದ ಸಹಾಯದಿಂದ ಅಭಿವ್ಯಕ್ತಗೊಳಿಸಲಾಗಿದೆ.

**ಕೋಷ್ಟಕ–1 : 2010 ರಿಂದ 2020ವರೆಗಿನ ಸ್ವಯಂ ಉದ್ಯೋಗ ಯೋಜನೆಯ ಅಂಕಿ–ಅಂಶಗಳ ವಿಶ್ಲೇಷಣೆ (ರೂ. ಲಕ್ಷಗಳಲ್ಲಿ)**

| ಕ್ರಮ ಸಂಖ್ಯೆ | ವಿಷಯಗಳು | | 2010–2011 | 2011–2012 | 2012–2013 | 2013–2014 | 2014–2015 | 2015–2016 | 2016–2017 | 2017–2018 | 2018–2019 | 2019–2020 |
|---|---|---|---|---|---|---|---|---|---|---|---|---|
| 1 | ಪ್ರಾರಂಭಿಕ ಶಿಲ್ಕು | | 12125 | – | 200 | 3381.53 | 3008.65 | 1314.90 | 3961.25 | 7082.77 | 40639.42 | 28783.94 |
| 2 | ವಾರ್ಷಿಕ ಗುರಿ | | – | 11175 | – | – | – | – | – | – | – | – |
| 3 | ಆಯವ್ಯಯ | | – | 2200 | 2200 | 1254 | 2000 | 4000 | 4500 | 16400 | 13200 | 13000 |
| 4 | ಕ್ರೊಡೀಕೃತ ಅನುದಾನ | | – | – | 1000 | – | 0.00 | 0.00 | 847.00 | 4500 | – | – |
| 5 | ಬಿಡುಗಡೆಯಾದ ಅನುದಾನ | | – | 2000 | 3200 | 1254 | – | – | – | 23400 | 14772.89 | 0.00 |
| 6 | ವಿಶೇಷ ಕೇಂದ್ರೀಯ ಸಹಾಯಧನ | | – | – | – | – | 1300 | 1313.38 | 6344.20 | 2500 | 1572 | – |
| 7 | ಖಜಾನೆಯಿಂದ ಸೆಳೆದ ಮೊತ್ತ | | – | – | – | – | – | – | – | – | – | 0.00 |
| 8 | ಒಟ್ಟು ಲಭ್ಯವಿರುವ ಅನುದಾನ | | – | – | – | – | – | – | – | – | – | 28783.94 |
| 9 | ಒಟ್ಟು ವೆಚ್ಚ | | – | – | 2277.93 | 4551.71 | 3785 | 3599.12 | 7311.96 | 14488.47 | 30318.39 | 6444.25 |
| 10 | ಸಾಧಿಸಿದ ಭೌತಿಕ | ಗುರಿ | 11051 | 1830.05 | 35122 | 10902 | 22677 | 14172 | 37938 | 48554 | 73590 | 2827 |
| | | ಸಾಧನೆ | 874.26 | 975 | 9834 | 7725 | 8666 | 12550 | 25390 | 36908 | 67106 | 2024 |

**ಆಧಾರ ಗ್ರಂಥಗಳು/ಆಕರಗಳು**


- 2011 ರಿಂದ 2020ವರೆಗಿನ ವಾರ್ಷಿಕ ಕ್ರಿಯಾ ಯೋಜನೆ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
- 2010–2011ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2011–2012ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2012–2013ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2013–2014ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2014–2015ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2015–2016ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2016–2017ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2017–2018ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

- 2018–2019ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- 2019–2020ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಸಾಧಿಸಿದ ಪ್ರಗತಿ ವಿವರಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
- Dr. B.R. Ambedkar Development Corporation Limited. (2011). *Progress achieved for the financial year 2010–2011 up to the month of March 2011*. Bangalore, India: Author.
- Dr. B.R. Ambedkar Development Corporation Limited. (2012). *Progress achieved for the financial year 2011–2012 up to the month of March 2012*. Bangalore, India: Author.
- Dr. B.R. Ambedkar Development Corporation Limited. (2013). *Progress achieved for the financial year 2012–2013 up to the month of March 2013*. Bangalore, India: Author.
- Dr. B.R. Ambedkar Development Corporation Limited. (2014). *Progress achieved for the financial year 2013–2014 up to the month of March 2014*. Bangalore, India: Author.
- Dr. B.R. Ambedkar Development Corporation Limited. (2015). *Progress achieved for the financial year 2014–2015 up to the month of March 2015*. Bangalore, India: Author.